**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

**<u>ಸೆಷನ್ಸ್ ಕೇಸ್ ನಂಃ 34/2025</u>** <u>ಪಿ.ಡಬ್ಲ್ಯೂ 5</u>

<u>ಸಿ.ಡಬ್ಲ್ಯೂ.4</u>

| | |
|---|---|
| ಸಾಕ್ಷಿದಾರರ ಹೆಸರು | ನಾಗಪ್ಪ ಬಿ. ಶೆಟ್ಟಿ |
| ತಂದೆಯ ಹೆಸರು | ಯಮನಪ್ಪ ಬಿ. ಶೆಟ್ಟಿ |
| ವಯಸ್ಸು | 38 ವರ್ಷ |
| ಉದ್ಯೋಗ | ಸೆಕ್ಯುರಿಟಿ |
| ವಿಳಾಸ | ಬಾಗಲಕೋಟೆ |

ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) 2005 ರಿಂದ ನಾನು ಇಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ನಾನು ಕೃಷ್ಣ ಮಠದಲ್ಲಿ ಸೆಕ್ಯುರಿಟಿ ಆಗಿದ್ದೇನೆ. ನನಗೆ ಚಾಸಾ-1 ರಿಂದ 3 ಮತ್ತು 5, 6, ಇವರ ಪರಿಚಯ ಇಲ್ಲ. ನನಗೆ ಈಗ ವಿ.ಸಿ ಮೂಲಕ ತೋರಿಸಿದ ಆರೋಪಿಯ ಪರಿಚಯ ಇಲ್ಲ. ಸುಮಾರು 6 ತಿಂಗಳ ಹಿಂದೆ ರಾತ್ರಿ 11 ಗಂಟೆಯ ನಂತರದ ಸಮಯದಲ್ಲಿ ನಾವು ಇದ್ದ ಜಾಗೆಯಿಂದ ಮುಂದೆ ಇರುವ ಪಾರ್ಕಿಂಗ್ ಜಾಗೆಯಲ್ಲಿ ಬೊಬ್ಬೆ ಹಾಕುವ ಶಬ್ದ ಕೇಳಿತು. ಆಗ ಅಲ್ಲಿ ಹೋಗಿ ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿ ಬಿದ್ದುಕೊಂಡಿದ್ದ, ಆತನ ತಲೆಯ ಹಿಂಭಾಗದಲ್ಲಿ ಗಾಯವಾಗಿತ್ತು. ಆತನನ್ನು ನಾನು ಇನ್ನೊಬ್ಬನ ಸಹಾಯದಿಂದ ಅಜ್ಜರಕಾಡು ಆಸ್ಪತ್ರೆಗೆ ಸೇರಿಸಿದ್ದೆ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ಆದಿನ ಗಾಯವಾಗಿದ್ದ ವ್ಯಕ್ತಿ ಯಾರು, ಯಾವ ಕಾರಣಕ್ಕೆ ಹಲ್ಲೆ ಮಾಡಿದ್ದರು ಎಂದು ಗೊತ್ತಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅವಕಾಶ ಕೋರಿದ್ದು , ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ತಾರೀಕು 21-03-2025 ರಂದು ನಾನು ರಾತ್ರಿ ಕರ್ತವ್ಯದಲ್ಲಿದ್ದಾಗ ಈಗ ನನಗೆ ತೋರಿಸಿದ ಆರೋಪಿಯನ್ನು ಓಡುತ್ತಿರುವುದನ್ನು ನೋಡಿ, ನಾನು ಪಾರ್ಕಿಂಗ್ ಜಾಗೆಯ ಬಳಿ ಹೋಗಿದ್ದೆ ಎಂದರೆ ಸರಿಯಲ್ಲ. ಆರೋಪಿ ಅಟ್ಟಿಸಿಕೊಂಡು ಹೋಗಿದ್ದ ವ್ಯಕ್ತಿಯನ್ನು ಚಾಕುವಿನಿಂದ ಹಲ್ಲೆ ಮಾಡುವುದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ಆದಿನ ಹಲ್ಲೆಗೊಳಗಾಗಿದ್ದ ವ್ಯಕ್ತಿ ಈ ಮೊದಲು ಆರೋಪಿಯಿಂದ ತಪ್ಪಿಸಿಕೊಂಡು ಹೋಗಿದ್ದ ಎಂದರೆ ಗೊತ್ತಿಲ್ಲ. ಆದಿನ ಗಾಯಗೊಂಡಿದ್ದ ವ್ಯಕ್ತಿ ಹಲ್ಲೆ ಮಾಡಿದ ವ್ಯಕ್ತಿಯೊಂದಿಗೆ ಪಾರ್ಕಿಂಗ್ ಜಾಗೆಯಲ್ಲಿಯೇ ಮಲಗಿಕೊಂಡಿದ್ದನು ಎಂದು, ಆಗ ಕೇಳಿದ ಮೊಬೈಲ್ ಗಾಗಿ ಹಲ್ಲೆಯಾಗಿತ್ತು ಎಂದು ತಿಳಿದು ಈಗ ಓದಿದ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಿದೆ.

2) ಆದಿನ ಆರೋಪಿಯಿಂದ ಹಲ್ಲೆಗೊಳಗಾದ ವ್ಯಕ್ತಿಗಳು ನನಗೆ ಯಾರೆಂದು ತಿಳಿದಿತ್ತು ಎಂದರೆ ಸರಿಯಲ್ಲ. ನಾನು ಆದಿನ ಆರೋಪಿಯನ್ನು ನೋಡಿದ್ದರೂ ಸಹ, ಈಗ ಆರೋಪಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

1) ಆದಿನ ತಂಟೆಯಾಗಿದ್ದ ಜಾಗೆಯಲ್ಲಿ ಅನೇಕ ಜನ ಕಾರ್ಮಿಕರು ರಾತ್ರಿ ಮಲಗಿರುತ್ತಾರೆ ಎಂದರೆ ನಿಜ. ಕೆಲವರು ಅಲ್ಲಿಯೇ ತಂಟೆ ಮಾಡಿಕೊಳ್ಳುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಕೆಲಸದ ಸಮಯ ರಾತ್ರಿ 10.30 ರಿಂದ ಬೆಳಗ್ಗಿನ 6.00 ಗಂಟೆಯವರೆಗೆ. ನಮ್ಮ ಪರಿಸರದಲ್ಲಿಯೇ ಒಂದು ಪೊಲೀಸ್ ಚೌಕಿ ಇದೆ. ಪೊಲೀಸರು ನನ್ನನ್ನು ವಿಚಾರಿಸಿಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.